RNU AIR DHARWAD

MAY 30, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- ಸಂಸದರ ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವ; ಧಾರವಾಡದಲ್ಲಿ ಇಂದು, 'ವಸಂತ ಗಾನ ಲಹರಿ' ರಾಷ್ಟ್ರೀಯ ಸಂಗೀತೋತ್ಸವ.
- ಧಾರವಾಡದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪ್ಲ್ ಐ.ಟಿ.ಯ ಎಂಟನೇ ಘಟಿಕೋತ್ಸವ ಇಂದು.
- ನಾಡಿದ್ದು ಜೂನ್ 1 ರಿಂದ, ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯದಿಂದ, ಕೃಷಿ ಭೂಮಿ ಉಳಿಸಿ, ರಾಷ್ಟ್ರವ್ಯಾಪಿ ಮಾಸಿಕ ಅಭಿಯಾನ, ಆರಂಭ.
- ಆಕಾಶವಾಣಿಯ, ಮನ್ ಕಿ ಬಾತ್; ನಾಳೆ ಬೆಳಗ್ಗೆ 11 ಗಂಟೆಗೆ, 134ನೇ ಆವೃತ್ತಿ ಪ್ರಸಾರ.

<><><>

**ಈಗ ವಾರ್ತೆಗಳ ವಿವರ**

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ, ಸಂಸದರ ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವದ ಭಾಗವಾಗಿ, ಧಾರವಾಡ ಲೋಕಸಭಾ ಕ್ಷೇತ್ರದ ಸಂಸದ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಧಾರವಾಡದ ಸತ್ತೂರಿನ, ಶ್ರೀ ಡಿ. ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ, ಇಂದು ರಾಷ್ಟ್ರೀಯ ಸಂಗೀತೋತ್ಸವ – 'ವಸಂತ ಗಾನ ಲಹರಿ' ಆಯೋಜಿಸಿದ್ದಾರೆ. ಬೆಳಗ್ಗೆ 9.30ಕ್ಕೆ ಸಂಗೋತೋತ್ಸವ ಆರಂಭವಾಗಲಿದ್ದು, ರಾತ್ರಿ 9.30ರ ವರೆಗೆ ಜರುಗಲಿದೆ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕಿ, ವಿದುಷಿ ಕೌಶಿಕಿ ಚಕ್ರವರ್ತಿ, ಪಂಡಿತ ಜಯತೀರ್ಥ ಮೇವುಂಡಿ, ಬಾನ್ಸುರಿ ವಾದಕ, ಪಂಡಿತ ಪ್ರವೀಣ ಗೋಡಖಿಂಡಿ, ಸಿತಾರ್ ವಾದಕಿ ಅನುಪಮಾ ಭಾಗವತ ಸೇರಿದಂತೆ, ರಾಷ್ಟ್ರ ಖ್ಯಾತಿಯ ಕಲಾವಿದರು ಪಾಲ್ಗೊಳ್ಳಲಿದ್ದಾರೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಸರ್ವರಿಗೂ ಸ್ವಾಗತ ಕೋರಿದ್ದಾರೆ. ಖ್ಯಾತ ಹಿಂದೂಸ್ಥಾನಿ ಗಾಯಕ, ಪಂಡಿತ ಜಯತೀರ್ಥ ಮೇವುಂಡಿ, ಸರ್ವರನ್ನೂ 'ವಸಂತ ಗಾನ ಲಹರಿ'ಗೆ ಆಹ್ವಾನಿಸಿದ್ದಾರೆ.

<><><>

ಪಂಡಿತ ಜಯತೀರ್ಥ ಮೇವುಂಡಿ ಧ್ವನಿ– 37 ಸೆಕೆಂದುಗಳು

<><><>

ನಾಡಿದ್ದು, ಜೂನ್ 1 ರಿಂದ 30ರ ವರೆಗೆ, ದೇಶಾದ್ಯಂತ, 'ಕೃಷಿ ಭೂಮಿ ಉಳಿಸಿ' ಮಾಸಿಕ ಅಭಿಯಾನ ನಡೆಯಲಿದೆ ಎಂದು, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ ಶಿವರಾಜಸಿಂಗ್ ಚೌವ್ಹಾಣ್ ತಿಳಿಸಿದ್ದಾರೆ. ಹೊಸದಿಲ್ಲಿಯ, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ, ಎರಡು ದಿನಗಳ, 'ರಾಷ್ಟ್ರೀಯ ಕೃಷಿ ಸಮ್ಮೇಳನ–ಮುಂಗಾರು ಅಭಿಯಾನ 2026' ಉದ್ಘಾಟಿಸಿ, ಮಾತನಾಡಿದರು. ದೇಶದ ರೈತರ ಕಠಿಣ ಪರಿಶ್ರಮದಿಂದ, ಆಹಾರಧಾನ್ಯಗಳ ಉತ್ಪಾದನೆಯಲ್ಲಿ, ಹೊಸ ದಾಖಲೆ ಸೃಷ್ಟಿಸಲಾಗಿದೆ. 3 ಸಾವಿರದ 765 ಲಕ್ಷ ಟನ್ ಉತ್ಪಾದನೆ ಅಂದಾಜಿಸಲಾಗಿದೆ. ಕಳೆದ ವ ್ಷಕ್ಕೆ ಹೋಲಿಸಿದರೆ, 188 ಲಕ್ಷ ಟನ್‌ಗಳ ್ಹ ಏರಿಕೆಯಾಗಿದೆ ಎಂದರು. 1 ಲಕ್ಷ ಕ್ವಿಂಟಾಲ್‌ಗೂ ಅಧಿಕ ಪ್ರಮಾಣದ, ರಾಷ್ಟ್ರೀಯ ಬೀಜ ಭಂಡಾರ ರಚಿಸಲಾಗಿದೆ. ಈ ವರೆಗೆ 9 ಕೋಟಿ 17 ಲಕ್ಷಕ್ಕೂ ಅಧಿಕ ರೈತರಿಗೆ, ಕಿಸಾನ್ ಕಾರ್ಡ್ ವಿತರಿಸಲಾಗಿದೆ ಎಂದು ಕೇಂದ್ರ ಸಚಿವ ಚೌವ್ಹಾಣ್ ಹೇಳಿದರು.

<><><>

ಹೊಸ ಆದಾಯ ತೆರಿಗೆ ಕಾಯ್ದೆಯನ್ನು ಸರಳಗೊಳಿಸಲಾಗಿದ್ದು, ಇದು ತೆರಿಗೆದಾರರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಲಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಐ.ಸಿ.ಎ.ಐ ಭವನದಲ್ಲಿ, ನೇರ ತೆರಿಗೆಗಳ ಸಮಿತಿ, ಹುಬ್ಬಳ್ಳಿ ಶಾಖೆ ಆಯೋಜಿಸಿದ್ದ, 'ಆದಾಯ ತೆರಿಗೆ ಕಾಯ್ದೆ–2025' ಕುರಿತ, ಎರಡು ದಿನಗಳ ವಿಚಾರ ಸಂಕಿರಣ, ಉದ್ಘಾಟಿಸಿ ಅವರು, ಮಾತನಾಡಿದರು. ಲೆಕ್ಕ ಪರಿಶೋಧಕರು, ದೇಶದ ಆರ್ಥಿಕ ಶಿಸ್ತು, ತೆರಿಗೆ ಜಾಗೃತಿ ಹಾಗೂ ಕೈಗಾರಿಕಾ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ ಎಂದು, ಶ್ಲಾಘಿಸಿದರು. ಐ.ಸಿ.ಎ.ಐ. – ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಹುಬ್ಬಳ್ಳಿ ಶಾಖೆ, ಉತ್ತರ ಕರ್ನಾಟಕದ ಯುವ ವೃತ್ತಿಪರರಿಗೆ, ಗುಣಮಟ್ಟದ ತರಬೇತಿ ನೀಡುತ್ತಿದೆ ಎಂದು, ಸಚಿವ ಜೋಶಿ ಮೆಚ್ಚುಗೆ ವ್ಯಕ್ತ ಪಡಿಸಿದರು.

<><><>

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ, ಇಂದು ಸಂಜೆ ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜರುಗಲಿದೆ. ಸಭೆಯ ಅಧ್ಯಕ್ಷತೆಯನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ, ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಹಿಸಲಿದ್ದಾರೆ. ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ, ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ರಣದೀಪ ಸಿಂಗ್ ಸುರ್ಜೇವಾಲ, ವಿಧಾನಪರಿ ತ್ ಸಭಾ ನಾಯಕ ಎನ್.ಎಸ್.ಬೋಸರಾಜು ಸೇರಿದಂತೆ, ಕಾಂಗ್ರೆಸ್‌ನ ಎಲ್ಲ ಶಾಸಕರು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ, ನೂತನ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ನಡೆಯಲಿದ್ದು, ಅವರು ರಾಜ್ಯಪಾಲರನ್ನು ಭೇಟಿ ಮಾಡಿ, ಸರ್ಕಾರ ರಚನೆ ಹಕ್ಕು ಮಂಡಿಸಲಿದ್ದಾರೆ.

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ನಾಳೆ ದಕ್ಷಿಣಕನ್ನಡ ಜಿಲ್ಲೆ, ಬೆಳ್ತಂಗಡಿಯಲ್ಲಿ, ಸಿರಿ ಕೈಗಾರಿಕಾ ಪಾರ್ಕ್ ಉದ್ಘಾಟಿಸಲಿದ್ದಾರೆ. ಬಳಿಕ ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಅದೇ ದಿನ ಅವರು ಕೇರಳಂಗೆ ತೆರಳಿ ಕೊಟ್ಟಾಯಂನಲ್ಲಿ ಮಲಯಾಳಂ ದಿನ ಪತ್ರಿಕೆ ದೀಪಿಕಾದ 140ನೇ ವಾರ್ಷಿಕೋತ್ಸವವನ್ನು ಉದ್ಘಾಟಿಸಲಿದ್ದಾರೆ.

<><><>

ರಾಜ್ಯದ ನೀರಾವರಿ ಯೋಜನೆಗಳ, ಕಾರ್ಯಕ್ಷಮತೆ ಅಧ್ಯಯನಕ್ಕಾಗಿ, ವಿಧಾನ ಪರಿ ‘ತ್ ಶಾಸಕ ಎಸ್.ರವಿ ಅಧ್ಯಕ್ಷತೆಯಲ್ಲಿ, 18 ಜನ ಶಾಸಕರು ಹಾಗೂ ಸದಸ್ಯರನ್ನೊಳಗೊಂಡ, ಸಮಿತಿಯನ್ನು ಸರ್ಕಾರ ರಚಿಸಿದೆ. ಧಾರವಾಡದ, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ವಾಲ್ಮಿಯಲ್ಲಿ ಸಭೆ ಜರುಗಿತು. ಧಾರವಾಡ, ಗದಗ, ಬೆಳಗಾವಿ, ಹಾವೇರಿ, ಬಾಗಲಕೋಟೆ ಹಾಗೂ ವಿಜಯಪುರ ವಿಭಾಗದಲ್ಲಿ, ಪ್ರಸ್ತುತ ಪ್ರಗತಿಯಲ್ಲಿರುವ ಮತ್ತು ದುರಸ್ತಿಯಲ್ಲಿರುವ, ಏತ ನೀರಾವರಿ ಯೋಜನೆಗಳು, ಮತ್ತು ಕೆರೆ ತುಂಬಿಸುವ ಯೋಜನೆಗಳ ಕಾರ್ಯಕ್ಷಮತೆಯ ಕುರಿತಂತೆ, ಸಭೆಯಲ್ಲಿ ಚರ್ಚೆ ನಡೆಯಿತು. ಜಲ ಸಂಪನ್ಮೂಲ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ, ಏತ ನೀರಾವರಿ ಯೋಜನೆಗಳು, ಅಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸುವ ಯೋಜನೆ, ಕೆರೆ ತುಂಬಿಸುವ ಯೋಜನೆಗಳ ಹಾಗೂ ಸೂಕ್ಷ್ಮ ನೀರಾವರಿ ಯೋಜನೆಗಳನ್ನು ಸಮಿತಿ ಅಭ್ಯಸಿಸಲಿದೆ.

<><><>

ಧಾರವಾಡದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಟ್ರಿಪ್ಲ್ ಐ.ಟಿ.ಯ, ಎಂಟನೇ ಘಟಿಕೋತ್ಸವ ಇಂದು, ಬೆಳಗ್ಗೆ 11 ಗಂಟೆಗೆ ಹುಬ್ಬಳ್ಳಿ ತಾಲೂಕು, ನವನಗರದಲ್ಲಿರುವ ಸಂಸ್ಥೆಯ ಕ್ಯಾಂಪಸ್ ನಲ್ಲಿ ಆಯೋಜಿತವಾಗಿದೆ. ಹೊಸದಿಲ್ಲಿ, ಭಾರತೀಯ ತಂತ್ರಜ್ಞಾನ ಸಂಸ್ಥೆ, ಐ.ಐ.ಟಿ. ನಿರ್ದೇಶಕ, ಪ್ರೊಫೆಸರ್ ರಂಗನ್ ಬ್ಯಾನರ್ಜಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಟ್ರಿಪ್ಲ್ ಐ.ಟಿ. ಆಡಳಿತ ಮಂಡಳಿ ಅಧ್ಯಕ್ಷ, ಜಲಜ ದಾನಿ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಟ್ರಿಪ್ಲ್ ಐ.ಟಿ. ನಿರ್ದೇಶಕ, ಪ್ರೊಫೆಸರ್ ಎಸ್.ಆರ್. ಮಹದೇವಪ್ರಸನ್ನ.

<><><>

ಎಸ್.ಆರ್. ಮಹದೇವಪ್ರಸನ್ನ ಧ್ವನಿ- 48 ಸೆಕೆಂದುಗಳು

<><><>

ಆಕಾಶವಾಣಿಯ, ಬಹುಶ್ರುತ, ‘ಮನ್ ಕಿ ಬಾತ್’ನ 134ನೇ ಆವೃತ್ತಿ, ನಾಳೆ 31 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ತಮ್ಮ ಮನದ ಮಾತುಗಳನ್ನಾಡಲಿದ್ದಾರೆ. ಮನ್ ಕಿ ಬಾತ್, ಆಕಾಶವಾಣಿ, ನ್ಯೂಸ್ ಆನ್ ಏರ್ ಆಪ್, ಯುಟ್ಯೂಬ್ ಚಾನಲ್ ಸೇರಿದಂತೆ, ಪ್ರಧಾನಮಂತ್ರಿ ಕಚೇರಿಯ, ಯುಟ್ಯೂಬ್ ಚಾನಲ್‌ನಲ್ಲೂ ಪ್ರಸಾರವಾಗಲಿದೆ. ಬಳಿಕ, ಕನ್ನಡ ಸೇರಿದಂತೆ, ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ, ಮನದ ಮಾತು ಬಿತ್ತರಗೊಳ್ಳಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಸಂಸದರ ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವ; ಧಾರವಾಡದಲ್ಲಿ ಇಂದು, 'ವಸಂತ ಗಾನ ಲಹರಿ' ರಾಷ್ಟ್ರೀಯ ಸಂಗೀತೋತ್ಸವ.**

**ಧಾರವಾಡದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪ್ಲ್ ಐ.ಟಿ.ಯ ಎಂಟನೇ ಘಟಿಕೋತ್ಸವ ಇಂದು.**

**ನಾಡಿದ್ದು ಜೂನ್ 1 ರಿಂದ, ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯದಿಂದ, ಕೃಷಿ ಭೂಮಿ ಉಳಿಸಿ, ರಾಷ್ಟ್ರವ್ಯಾಪಿ ಮಾಸಿಕ ಅಭಿಯಾನ, ಆರಂಭ.**

**ಆಕಾಶವಾಣಿಯ, ಮನ್ ಕಿ ಬಾತ್; ನಾಳೆ ಬೆಳಗ್ಗೆ 11 ಗಂಟೆಗೆ, 134ನೇ ಆವೃತ್ತಿ ಪ್ರಸಾರ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>